ಸಾಕ್ಷಿ ಯನ್ನು ದಿಃ 02.08.2024 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರ ಪರ ವಕೀಲರಿಂದಃ

1. ನಾನು ಅರ್ಜಿದಾರರು ಹಾಗೂ 1 ರಿಂದ 9 ನೇ ಎದುರುದಾರರ ರಕ್ತ ಸಂಬಂಧಿ ಅಲ್ಲ.
2. ಅಸಲು ದಾವೆ ನಂ.135/2010 ನ್ನು ಯಾರು ಯಾರ ಮೇಲೆ ಹಾಕಿದ್ದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದ ಈಶ್ವರಿ ರವರು ದಾವೆ ಹಾಕಿರುವ ಬಗ್ಗೆ 4-5 ವರ್ಷದ ಹಿಂದೆ ನನಗೆ ತಿಳಿದಿರುತ್ತದೆ. ಅವರು ಯಾವುದರ ಸಲುವಾಗಿ ದಾವೆ ಹೂಡಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯ ತೀರ್ಪಿನ ಪ್ರತಿಯನ್ನು ನಾನು ಪಡೆದಿಲ್ಲ. ನಾನು ತೀರ್ಪು ಏನಾಗಿದೆ ಮತ್ತು ಯಾವ ದಿನಾಂಕದಂದು ಆಗಿದೆ ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ.
3. ಈಶ್ವರಿ ರವರು ಅವರ ಅಣ್ಣ ತಮ್ಮಂದಿರ ಮೇಲೆ ದಾವೆ ಹಾಕಿರುವ ಬಗ್ಗೆ 4-5 ವರ್ಷದ ಹಿಂದೆ ಗೊತ್ತಾಗಿರುತ್ತದೆ. ನನಗೆ ಗೊತ್ತಾದ ನಂತರ ಸದರಿ ದಾವೆ ಮೇಲೆ ನಾನು ಅಪೀಲು ಸಲ್ಲಿಸಿರುತ್ತೇನೆ. ಅದರ ನಂಬರ್ ಮತ್ತು ಯಾವ ನ್ಯಾಯಾಲಯದಲ್ಲಿ ಸಲ್ಲಿಸಿಲಾಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ನಾನು ಅಪೀಲು ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ.
4. ಪ್ರಸ್ತುತ ಅರ್ಜಿಯಲ್ಲಿ ನಾನು ಪಕ್ಷಗಾರನಾಗಿ ಮಾಡಲು ಅರ್ಜಿ ಸಲ್ಲಿಸಿದ್ದು, ಆದೇಶವಾಗಿರುತ್ತದೆ.
5. ನಾನು ಪಕ್ಷಗಾರನಾಗಿ ಸೇರುವ ಸಮಯದಲ್ಲಿ ನಮ್ಮ ವಕೀಲರು ಹಿರಿಯ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಬೇಕು ಎಂದು ಮಾಹಿತಿ ನೀಡಿದ್ದಾರೆ.
6. ನಿಮ್ಮ ವಕೀಲರು ಮಾಹಿತಿ ನೀಡಿದರೂ ಸಹ ನೀವು ಉದ್ದೇಶಪೂರ್ವಕವಾಗಿ ಮೇಲ್ಮನವಿ ಸಲ್ಲಿಸದೇ ಪ್ರಸ್ತುತ ಅರ್ಜಿಯಲ್ಲಿ ಎದುರುದಾರರಾಗಿ ಸೇರಿಸಲು ಅರ್ಜಿ ಸಲ್ಲಿಸಿಕೊಂಡಿರುತ್ತೀರಾ ಎಂದರೆ, ಸರಿಯಲ್ಲ.
7. ಯಾವ ಯಾವ ಆಸ್ತಿಯ ಮೇಲೆ ಡಿಕ್ರಿಯಾಗಿದೆ ಎಂದು ನನಗೆ ಗೊತ್ತಿಲ್ಲ
8. ನಮ್ಮ ನಿವೇಶನದ ಅಳತೆ 10 ಅಡಿ ಅಗಲ 56 ಅಡಿ ಉದ್ದ ಇದ್ದು, ಅದರ ನಂಬರ್ ನನಗೆ ಈಗ ನೆನಪಿಲ್ಲ. ಸದರಿ ಆಸ್ತಿಯು ಈ ಅರ್ಜಿಯಲ್ಲಿ ಎಷ್ಟನೇ ಐಟಂ ಎಂದು ಸಹ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಸರೋಜಮ್ಮ ಕೋಂ ಚೆನ್ನಸ್ವಾಮಿ ರವರಿಂದ ನಾನು 2011 ರಲ್ಲಿ ಖರೀದಿ ಮಾಡಿರುತ್ತೇನೆ.
9. ವೆಂಕಟೇಶ ರವರಿಂದ 2012 ರಲ್ಲಿ 10 ಅಡಿ ಅಗಲ ಹಾಗೂ 56 ಅಡಿ ಉದ್ದ ನಿವೇಶನ ಖರೀದಿ ಮಾಡಿದ್ದು, ಅದರ ನಂಬರ್ ನನಗೆ ಗೊತ್ತಿಲ್ಲ. ವೆಂಕಟೇಶ ರವರ ತಂದೆಯ ಹೆಸರು ನನಗೆ ಗೊತ್ತಿಲ್ಲ.
10. ಅ.ದಾ.135/2010 ನಾನು ಮೇಲೆ ಹೇಳಿದ ನಿವೇಶನಗಳನ್ನು ಖರೀದಿ ಮಾಡಿದ ಮೇಲೆ ತೀರ್ಪು

ಆಗಿರುತ್ತದೋ ಅಥವಾ ಮೊದಲೇ ಆಗಿತ್ತೊ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ.

11. ಸದರಿ ನಾನು ಖರೀದಿ ಮಾಡಿದ ಸರೋಜಮ್ಮ ಹಾಗೂ ವೆಂಕಟೇಶ ರವರ ಮೇಲೆ ಈಶ್ವರಿ ರವರು ದಾವೆ ಹಾಕಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

12. ನಾನು ಖರೀದಿಸುವ ಸಮಯದಲ್ಲಿ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿರುವ ಬಗ್ಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ.

13. ಈ ಅರ್ಜಿಗೆ ನೀವು ಯಾವ ದಾಖಲೆ ಹಾಕಿದ್ದೀರಾ ಎಂದರೆ, 2 ಕ್ರ ಯಪತ್ರ ಹಾಗೂ ಇ ಸ್ವತ್ತು ಹಾಗೂ ಆಧಾರ್ ಕಾರ್ಡ್ ನೀಡಿದ್ದೇನೆ.

14. ನಾನು ಖರೀದಿಸುವ ಮುಂಚೆ ಸದರಿ ಆಸ್ತಿ ಯಾರ ಹೆಸರಿನಲ್ಲಿದ್ದವು ಎಂದು ನಾನು ಅಸ್ಸೆಂಟ್ ದಾಖಲೆ ನೋಡಿದ್ದೇನೆ. ಸದರಿ ದಾಖಲೆಗಳನು ಸರೋಜಮ್ಮ ಮತ್ತು ವೆಂಕಟೇಶ ರವರ ಹೆಸರಿನಲ್ಲಿ ಇದ್ದವು. ಸದರಿ ಅಸ್ಸೆಂಟ್ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ನೀಡಿಲ್ಲ.

15. ನಾನು ಯಾವುದೇ ದಾಖಲೆಗಳನ್ನು ನೋಡದೇ ಸುಳ್ಳು ಕ್ರಯಪತ್ರವನ್ನು ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

16. ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿರುವ ಬಗ್ಗೆ ಗೊತ್ತಿದ್ದರೂ, ಈಶ್ವರಿ ರವರ ಗಮನಕ್ಕೆ ಬರದಂತೆ ನೀವು ಸುಳ್ಳು ಕ್ರ ಯಪತ್ರ ಗಳನ್ನು ಬರೆಸಿಕೊಂಡಿದ್ದೀರಾ ಎಂದರೆ ಸರಿಯಲ್ಲ.

17. ನೀವು ಸತ್ಯ ಮರೆಮಾಚಿ ಅರ್ಜಿ ಸಲ್ಲಿಸಿದ್ದು, ಉದ್ದೇಶಪೂರ್ವಕವಾಗಿ ಅಪೀಲು ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

18. ಈಶ್ವರಿ ಮತ್ತು 1 ರಿಂದ 9 ನೇ ಎದುರುದಾರರ ಪಿತ್ರಾರ್ಜಿತ ಆಸ್ತಿಯಾಗಳಾಗಿದ್ದು, ಅವುಗಳನ್ನು ಮಾರಾಟ ಮಾಡಲು ಸರೋಜಮ್ಮ ಅಥವಾ ವೆಂಕಟೇಶ ರವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಅವರ ಹೆಸರಿಗೆ ದಾಖಲೆ ಇದ್ದಿದ್ದಕ್ಕೆ ನಾನು ಖರೀದಿ ಮಾಡಿರುತ್ತೇನೆ.

19. ಸದರಿ ಆಸ್ತಿಗಳಲ್ಲಿ ಈಶ್ವರಿ ರವರಿಗೂ ಸಹ ಸಮಭಾಗ ಬರಬೇಕು ಎಂದು ನ್ಯಾಯಾಲಯದಿಂದ ಡಿಕ್ರಿ ಯಾಗಿದೆ ಎಂದರೆ ನನಗೆ ಗೊತ್ತಿಲ್ಲ

20. ದಾವೆ ಹಾಕುವ ಮುಂಚೆ ಈಶ್ವರಿ ರವರು ನೊಟೀಸು ನೀಡಿದ್ದರು ಎಂದರೆ, ನನಗೆ ಗೊತ್ತಿಲ್ಲ.

21. ಸದರಿ ಆಸ್ತಿಗಳ ಮೇಲೆ ದಾವೆ ಇರುವ ವಿಚಾರ ಗೊತ್ತಿದ್ದರೂ, ನೀವು ಸದರಿ ಆಸ್ತಿಗಳನ್ನು ಖರೀದಿ ಮಾಡಿದ್ದೀರಾ ಎಂದರೆ ಸರಿಯಲ್ಲ.

22. ನಿಮಗೆ ಈ ಅರ್ಜಿಯಲ್ಲಿ ಎದುರುದಾರರಾಗಿ ಸೇರಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

23. ಸದರಿ ಆಸ್ತಿಗಳನ್ನು ಹೊಡೆದುಕೊಳ್ಳಲು ನೀವು ಅನ್ಯಥಾ ಫಾಯಿದೆ ಹೊಂದಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

24. ನಿಮಗೆ ಈ ದಾವೆಯ ಬಗ್ಗೆ ಹಾಗೂ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಗೊತ್ತಿಲ್ಲ ಎಂದರೆ, ಸರಿ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ